# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6ಎ)ಪಿಆರ್/ /20-21

ಆಯುಕ್ತರವರ ಕಛೇರಿ
ಬರಹಗ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 4-8-2021

## ಕಛೇರಿ ಆದೇಶ

ವಿಷಯ: ದಿನಾಂಕ: 01-01-2021ಕ್ಕೆ ಇರುವಂತೆ ತಯಾರಿಸಿರುವ **ಕ್ರಿಮೆಟೋರಿಯಂ ಆಪರೇಟರ್** ವೃಂದದ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ **ಕ್ರಿಮೆಟೋರಿಯಂ ಆಪರೇಟರ್** ವೃಂದಕ್ಕೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಶೇ. 100%ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿರುತ್ತದೆ.

ಅದರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ **ಕ್ರಿಮೆಟೋರಿಯಂ ಆಪರೇಟರ್** ವೃಂದದ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01-01-2019ಕ್ಕೆ ಇರುವಂತೆ ದಿನಾಂಕ: 17-09-2019ರಂದು ಪ್ರಚುರಪಡಿಸಲಾಗಿದ್ದು, ಪ್ರಸ್ತುತ ದಿನಾಂಕ: 01-01-2021ಕ್ಕೆ ಇರುವಂತೆ ಕ್ರಿಮೆಟೋರಿಯಂ ಆಪರೇಟರ್ ವೃಂದದ ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಚುರಪಡಿಸಬೇಕಾಗಿರುತ್ತದೆ.

ಮೇಲ್ಕಂಡಂತೆ ದಿನಾಂಕ: 01-01-2021ಕ್ಕೆ ಇರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಇಂಜಿನಿಯರಿಂಗ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ **ಕ್ರಿಮೆಟೋರಿಯಂ ಆಪರೇಟರ್** ವೃಂದದ ಕರಡು ಸೇವಾ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಇದರೊಂದಿಗೆ ಲಗತ್ತಿಸಿ ಪ್ರಚುರಪಡಿಸಲಾಗಿದ್ದು, ಸದರಿ ಕರಡು ಸೇವಾ ಜೇಷ್ಠತಾ ಪಟ್ಟಿಯ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ 15 ದಿನಗಳೊಳಗೆ ಈ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಭಾವಿಸಿ, ಈ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.

: ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.

: ಸಂಬಂಧಪಟ್ಟ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸುತ್ತಾ, ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕೆಲಸ ಪರಿವೀಕ್ಷಕರುಗಳಿಗೆ ಜಾರಿ ಮಾಡಲು ಸೂಚಿಸಿದೆ.

: ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಕಳುಹಿಸುತ್ತಾ, ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು ಕೋರಿದೆ.

: ಸಂಬಂಧಪಟ್ಟ ನೌಕರರುಗಳಿಗೆ / ಕಛೇರಿ ಕಡತಕ್ಕೆ.

ದಿನಾಂಕ: 01-01-2021ಕ್ಕೆ ಇರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರಿಮೆಟೋರಿಯಂ ಆಪರೇಟರ್‌ಗಳ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿ.

| ಕ್ರಮ ಸಂಖ್ಯೆ | ಹೆಸರು | ವರ್ಗ | ಜನ್ಮ ದಿನಾಂಕ | ಕೆಲಸಕ್ಕೆ ಸೇರಿದ ದಿನಾಂಕ | ವಿದ್ಯಾರ್ಹತೆ | ಇಲಾಖಾ ಪರೀಕ್ಷೆಗಳು | ಷರಾ |
|---|---|---|---|---|---|---|---|
| 1. ಮೂಲ ವೃಂದ | | | | | | | |
| 1 | ಶ್ರೀನಿವಾಸ್ | ಸಾಮಾನ್ಯ | 10-01-1963 | 19-12-1988 | ಎಸ್‌ಎಸ್‌ಎಲ್‌ಸಿ ಐಟಿಐ (ಎಲೆಕ್ಟ್ರಿಕಲ್) | | |
| 2 | ವಿ. ಈಶ್ವರಪ್ರಸಾದ್ | ಪ.ಪಂಗಡ | 05-12-1973 | 09-03-2004 | ಎಸ್‌ಎಸ್‌ಎಲ್‌ಸಿ ಐಟಿಐ (ಎಲೆಕ್ಟ್ರಿಕಲ್) | | |
| 3 | ಎಂ. ಮಹಾದೇವಮ್ಮ | ಪ.ಜಾತಿ | 20-07-1975 | 09-10-2007 | ಎಸ್‌ಎಸ್‌ಎಲ್‌ಸಿ ಐಟಿಐ (ಎಲೆಕ್ಟ್ರಿಕಲ್) | | |
| 2. ಸ್ಥಳೀಯ ವೃಂದ-ಹೈದರಾಬಾದ್ ಕರ್ನಾಟಕ (ಯಾರೂ ಇರುವುದಿಲ್ಲ) | | | | | | | |
| 3. ಉಳಿಕೆ ವೃಂದ (ಮೂಲ ವೃಂದಲ್ಲಿ ಇರುವಂತೆ) | | | | | | | |

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ